**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ದಿನಾಂಕ: 06-06-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ಆರೋಪಿತನ ಪರ ಶ್ರೀ.ವಿ.ಕೆ.ಪಿ ವಕೀಲರಿಂದ</u>**

ನಾನು ಪೋಲಿಸ ಠಾಣೆಗೆ ಹೋಗಿರುವುದಿಲ್ಲ. ನಮ್ಮ ಮನೆಯಿಂದ ಸಂತೆ ಜಾಗ ಕಾಣಿಸುವುದಿಲ್ಲ. ನಮ್ಮ ಮನೆಯಿಂದ ಸಂತೆ ಜಾಗ ಎಷ್ಟು ದೂರದಲ್ಲಿ ಎಂದು ನನಗೆ ಗೊತ್ತಿಲ್ಲ. ಸಂತೆಯಲ್ಲಿ ಬಹಳ ಜನ ಇದ್ದರು.

2. ನನ್ನ ಮಗನಿಗೆ ಯಾರು ಹೊಡೆದರು ಎಂದು ನಾನು ನೋಡಿದ್ದೇನೆ. ಮುಬಾರಕ ತಾಂಬೋಳಿಯವರ ಮಗ ಜಾಫರ ಎನ್ನುವವನು ನನ್ನ ಮಗನಿಗೆ ಹೊಡೆದಿದ್ದಾನೆ. ಈ ವಿಚಾರವನ್ನು ನಾನು ಪೋಲಿಸರ ಮುಂದೆ ಹೇಳಿದ್ದೇನೆ. ಘಟನೆಯ ಬಗ್ಗೆ ಕೂಡಲೇ ನಾನು ನನ್ನ ಗಂಡನಿಗೆ ಪೋನ ಮಾಡಿ ಹೇಳಿದ್ದೇನೆ. ನನ್ನ ಗಂಡನ ಮೊಬೈಲ ನಂಬರ ನನಗೆ ಗೊತ್ತಿರುವುದಿಲ್ಲ, ಆದರೆ ನಾನು ಸಂತೆ ಮಾಡುವ ಅಂಗಡಿಯವರಿಗೆ ನನ್ನ ಗಂಡನ ಮೊಬೈಲ ನಂಬರ ಗೊತ್ತಿತ್ತು, ನನ್ನ ಪರಿಚಯದವರ ಮೊಬೈಲನಲ್ಲಿ ನನ್ನ ಗಂಡನಿಗೆ ಪೋನ ಮಾಡಿಸಿ ವಿಚಾರ ಹೇಳಿದ್ದೇನೆ. ನಾನು ನನ್ನ ಗಂಡನಿಗೆ ಪೋನ ಮಾಡಿ ವಿಚಾರ ಹೇಳಿಲ್ಲ ಎಂದು ಸೂಚಿಸುವುದು ಸರಿಯಲ್ಲ.

3. ಘಟನೆ ನಂತರ ನನ್ನ ಮಗನನ್ನು ಮನೆಗೆ ಕರೆದುಕೊಂಡು ಬರುವ ದಾರಿಯಲ್ಲಿ ನನ್ನ ಗಂಡ ಬಂದು ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಮೊದಲಿಗೆ ನನ್ನ ಮಗನನ್ನು ಆರ್.ಸಿ ಮಡ್ಡಿಯಲ್ಲಿ ತೋರಿಸಲು ಕರೆದುಕೊಂಡು ಹೋಗಿದ್ದೇವು ಅಲ್ಲಿ ವೈದ್ಯರು ಇರಲಿಲ್ಲ ಆದ ಕಾರಣ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನನ್ನ ಮಗ ಆರೋಪಿಯ ಮೇಲೆ ಮೋಟರಸೈಕಲ ಹಾಯಿಸಿ ಕೈ ಮುರಿದಿದ್ದನು ಎನ್ನುವುದು ಸರಿಯಲ್ಲ. ಆರೋಪಿಯೇ ನನ್ನ ಮಗನ ಕೈಯನ್ನು ಹಿಡಿದು ಎಳೆದಾಡಿದ್ದನು. ಆರೋಪಿ ನಮ್ಮ ಮೇಲೆ ದೂರು ಕೊಟ್ಟಿದ್ದ ಕಾರಣ

ಆ ದ್ವೇಷದಿಂದ ನನ್ನ ಗಂಡ ಆರೋಪಿಯ ಮೇಲೆ ಸುಳ್ಳು ದೂರನ್ನು ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ನಾನು ಆರೋಪಿ ವಿರುದ್ಧ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.